# Kannada Varnamala has 49

**ಸ್ವರಗಳು (Vowels): 13**

**ವ್ಯಂಜನಗಳು (Consonants): 34**

**ಯೋಗವಾಹಕಗಳು (Semi-vowels): 2**

ಅ ಆ ಇ ಈ ಉ ಊ ಋ

ಎ ಏ ಐ ಒ ಓ ಔ ಅಂ ಅಃ

ಕ ಖ ಗ ಘ ಙ


ಚ ಛ ಜ ಝ ಞ

ಟ ಠ ಡ ಢ ಣ

ತ ಥ ದ ಧ ನ

ಪ ಫ ಬ ಭ ಮ

- ಯ ರ ಲ ವ ಶ ಷ ಸ ಹ ಳ




Sample words

ಹೆಸರು

ಊರು

ಊಟ

ತಿಂಡಿ

ಔಷಧ

ಕೈ ಪಿಡಿ

. ಕ + ಅ = ಕ  ಕನ್ನಡ

. ಕ + ಆ = ಕಾ  **ಕಾಣೆಯಾಗಿದೆ**

. ಕ + ಇ = ಕಿ ಕಿರುನಗೆ

. ಕ + ಈ = ಕೀ  ಕೀಟನಾಶಕ

. ಕ + ಉ = ಕು ಕುರುಡು

. ಕ + ಊ = ಕೂ  ಕೂಟ

. ಕ + ಋ = ಕೃ **ಕೃಷಿ**

. ಕ + ಎ = ಕೆ ಕೆರಳು

. ಕ + ಏ = ಕೇ  **ಕೇಡಿ**

ಕ + ಐ = ಕೈ   ಕೈ ಪಿಡಿ

. ಕ + ಒ = ಕೊ   ಕೊಡು

. ಕ + ಓ = ಕೋ  ಕೋಳಿ

. ಕ + ಔ = ಕೌ   ಕೌತುಕ

.

. ಕ + ಅಂ = ಕಂ  ಕಂದ

. ಕ + ಅಃ = ಕಃ

ನಾಮಪದದ ವಿಧಗಳು

1. **ವಸ್ತುವಾಚಕ ಅಥವಾ ನಾಮವಾಚಕ,**
2. **ಗುಣವಾಚಕ,**
3. **ಸಂಖ್ಯಾವಾಚಕ,**
4. **ಸಂಖ್ಯೇಯವಾಚಕ,**
5. **ಭಾವನಾಮ,**
6. **ಪರಿಮಾಣ ವಾಚಕ,**
7. **ಪ್ರಕಾರವಾಚಕ**
8. **ದಿಗ್ವಾಚಕ,**
9. **ಸರ್ವನಾಮ ಎಂಬುದಾಗಿ ಅನೇಕ ಗುಂಪುಗಳಾಗಿ ವಿಂಗಡಿಸಬಹುದು.**

## 1. ವಸ್ತುವಾಚಕ ಅಥವಾ ನಾಮವಾಚಕ :

ಯಾವುದೇ ವಸ್ತು, ವ್ಯಕ್ತಿ, ಪ್ರಾಣಿ ಹಾಗೂ ಸ್ಥಳಗಳಿಗೆ ಇರುವ ಹೆಸರುಗಳನ್ನು ವಸ್ತುವಾಚಕಗಳೆನ್ನುವರು.
ವಸ್ತುವಾಚಕನಾಮಪದವನ್ನು ಚೇತನ (ಚೇತನವುಳ್ಳ), ಅಚೇತನ (ಚೇತನವಿಲ್ಲದ್ದು) ಎಂದು ವಿಭಾಗಿಸಲಾಗಿದೆ.
ಉದಾ : ಮನುಷ್ಯ, ಪ್ರಾಣಿ, ಪಕ್ಷಿ ಇವು ಚೇತನವುಳ್ಳವು.
ನೆಲ, ಜಲ, ಹಣ್ಣು, ಕಾಯಿ, ಮನೆ, ಬೆಟ್ಟ ಇವು ಚೇತನವಿಲ್ಲದವು.

ವಸ್ತುವಾಚಕ ನಾಮಪದದಲ್ಲಿ ಮುಖ್ಯವಾಗಿ ಮೂರು ವಿಧಗಳು. ಅವುಗಳೆಂದರೆ…
**1) ರೂಢನಾಮ**
**2) ಅಂಕಿತನಾಮ**
**3) ಅನ್ವರ್ಥನಾಮ**

**1) ರೂಢನಾಮ**:- ರೂಢಿಯಿಂದ ಬಂದ ಸಾಮಾನ್ಯ ವಾಚಕಗಳನ್ನು ಅಥವಾ ಹೆಸರುಗಳನ್ನು ರೂಢನಾಮ ಎನ್ನುವರು.
ಉದಾ:- ಹಳ್ಳಿ, ಊರು, ನಗರ, ಪಟ್ಟಣ, ನದಿ, ಪರ್ವತ, ಬೆಟ್ಟ, ಕಾಡು, ಕೆರೆ, ಹಳ್ಳ, ಗಿಡ, ಎಲೆ, ಅಡಿಕೆ, ಬಳ್ಳಿ, ಬಂಡೆಗಲ್ಲು, ಹೊಳೆ, ಮರ, ಮನುಷ್ಯ, ದೇಶ, ಹುಡುಗಿ, ಹುಡುಗ, ಶಾಲೆ, ಮನೆ, ರಾಜ, ಹೆಂಗಸು, ಗಂಡಸು, ಮಕ್ಕಳು, ಹೆಣ್ಣು, ಜನರು, ಮುದುಕ, ಮುದುಕಿ, ಹಸು, ಎಮ್ಮೆ -ಮುಂತಾದವು.

**2) ಅಂಕಿತನಾಮ**:- ವ್ಯವಹಾರದ ಉಪಯೋಗಕ್ಕಾಗಿ ಇಟ್ಟುಕೊಂಡ ಹೆಸರುಗಳೆಲ್ಲ ಅಂಕಿತನಾಮಗಳು.
ಉದಾ:- ಬ್ರಹ್ಮಪುತ್ರ, ಬೆಂಗಳೂರು, ಕಾವೇರಿ, ಹಿಮಾಲಯ, ಮನೀಶ್, ಬೇವು ಮುಂತಾದವು ಜೋಸೆಫ್, ಬೋರಣ್ಣ ಮುಂತಾದವು.

**3) ಅನ್ವರ್ಥನಾಮ** :- ರೂಪ, ಗುಣ, ಸ್ವಭಾವ, ವಿಶೇಷವಾದ ಅರ್ಥಕ್ಕೆ ಅನುಸಾರವಾಗಿ ನೀಡುವ ಹೆಸರುಗಳೆಲ್ಲ ಅನ್ವರ್ಥನಾಮಗಳು
ಉದಾ:- ಕವಿ, ಮೂಗ, ನೀತಿಜ್ಞ, ಕುಂಟ, ಹೆಳವ, ಗಿಡ್ಡ, ಬೆಪ್ಪ, ಕ್ರೂರಿ, ಪೆದ್ದ, ಬುದ್ಧಿವಂತ, ಧೀರ, ಹೇಡಿ, ಸಾಧು, ಜಿಪುಣ, ಅಷ್ಟಾವಕ್ರ, ಶಿಕ್ಷಕ, ವ್ಯಾಪಾರಿ, ಯೋಗಿ, ರೋಗಿ, ಸನ್ಯಾಸಿ, ವೈದ್ಯ, ಶಿಕ್ಷಕಿ, ಪಂಡಿತ, ಮೂಕ, ವಿದ್ವಾಂಸ, ಪೂಜಾರಿ, ಕುರುಡ, ಜಾಣ, ಕಿವುಡ, ದಡ್ಡ, ವಿಜ್ಞಾನಿ, ದಾನಿ, ಅಭಿಮಾನಿ ಮುಂತಾದವು.

ವಸ್ತುಗಳ ಗುಣ, ರೀತಿ, ಸ್ವಭಾವಗಳನ್ನು ಹೇಳುವ ವಿಶೇಷಣಗಳೇ ಗುಣವಾಚಕಗಳು. ವಿಶೇಷಣಗಳನ್ನು ಯಾವುದಕ್ಕೆ ಹೇಳಲಾಗುತ್ತದೋ ಅಂಥ ಶಬ್ದಗಳನ್ನು ವಿಶೇಷ್ಯಗಳು ಎನ್ನುತ್ತಾರೆ.

| ವಿಶೇಷಣ | ವಿಶೇಷ್ಯ |
|---|---|
| ಸಿಹಿ | ಹಣ್ಣು |
| ದೊಡ್ಡ | ನದಿ |
| ಒಳ್ಳೆಯ | ಹುಡುಗಿ |
| ಕೆಟ್ಟ | ಮನುಷ್ಯ |
| ದೊಡ್ಡದು | ಮರ |
| ಹಳತು | ಸಿರೆ |

ಉದಾ:- ಕೆಂಪು, ದೊಡ್ಡ, ಚಿಕ್ಕ, ಹಳೆಯ, ಕರಿಯ, ಕಿರಿಯ, ಒಳ್ಳೆಯ, ಕೆಟ್ಟ, ಹೊಸದು, ದೊಡ್ಡದು ಇತ್ಯಾದಿ ಪದಗಳು.

### 3) ಸಂಖ್ಯಾವಾಚಕ :

ಸಂಖ್ಯೆಯನ್ನು ಸೂಚಿಸುವ ಪದಗಳೇ ಸಂಖ್ಯಾವಾಚಕಗಳು.
ಉದಾ : ಒಂದು, ಎರಡು, ಹತ್ತು, ನೂರೈದು, ಸಾವಿರ, ಲಕ್ಷ, ಕೋಟಿ ಇತ್ಯಾದಿ.

### 4) ಸಂಖ್ಯೇಯವಾಚಕ :

ಸಂಖ್ಯೆಯಿಂದ ಕೂಡಿದ ಶಬ್ದಗಳೆಲ್ಲವೂ ಸಂಖ್ಯೇಯವಾಚಕಗಳು.

| ಸಂಖ್ಯಾವಾಚಕ | ಸಂಖ್ಯೇಯವಾಚಕ |
|---|---|
| ಒಂದು | ಒಬ್ಬ, ಒಬ್ಬಳು |
| ಎರಡು | ಇಬ್ಬರು, ಎರಡನೆಯ, ಇಮ್ಮಡಿ |
| ಮೂರು | ಮೂವರು, ಮೂರನೆಯ, ಮೂರರಿಂದ |
| ನಾಲ್ಕು | ನಾಲ್ವರು, ನಾಲ್ಕನೆಯ, ನಾಲ್ವರಿಂದ |
| ಐದು | ಐವರು, ಪಂಚಾಮೃತ |

### 5) ಭಾವನಾಮ :

ವಸ್ತು ಮತ್ತು ಕ್ರಿಯೆಗಳ ಭಾವವನ್ನು ತಿಳಿಸುವ/ಸೂಚಿಸುವ ಪದಗಳೇ ಭಾವನಾಮಗಳು.
ಓಹೋ, ಅಯ್ಯೋ, ಅಬ್ಬಬ್ಬ
ಉದಾ : ಕೆಚ್ಚನೆಯದರ ಭಾವ – ಕೆಂಪು
ಬಿಳಿದರ ಭಾವ – ಬಿಳುಪು
ಹಿರಿದರ ಭಾವ – ಹಿರಿಮೆ
ನೋಡುವುದರ ಭಾವ- ನೋಟ
ಆಡುವುದರ ಭಾವ – ಆಟ
ಮಾಡುವುದರ ಭಾವ = ಮಾಟ

### 6) ಪರಿಮಾಣವಾಚಕ :

ವಸ್ತುಗಳ ಸಾಮಾನ್ಯ ಅಳತೆ, ಪರಮಾಣ, ಗಾತ್ರ-ತ್ಯಾದಿಗಳನ್ನು ಹೇಳುವ ಶಬ್ದಗಳನ್ನು ಪರಿಮಾಣವಾಚಕಳೆನ್ನುವರು.
ಉದಾ:- ಅಷ್ಟು, ಇಷ್ಟು, ಹಲವು, ಕೆಲವು, ಅನಿತು
`ಅಷ್ಟು ದೊಡ್ಡ ಮರವನ್ನು ಹೇಗೆ ಕಡಿದರು?'
`ಇಷ್ಟು ಜನರು ಇಲ್ಲಿ ಸೇರಿ ಏನು ಮಾಡುತ್ತಾರೆ?'
`ತರಗತಿಯಲ್ಲಿ ಎಷ್ಟು ವಿದ್ಯಾರ್ಥಿಗಳಿದ್ದಾರೆ?'
– ಈ ವಾಕ್ಯಗಳಲ್ಲಿ `ಅಷ್ಟು' `ಇಷ್ಟು', `ಎಷ್ಟು' ಎಂಬ ಪದಗಳಿವೆ. ಈ ಪದಗಳು ನಿರ್ದಿಷ್ಟ ಅಳತೆ, ಸಂಖ್ಯೆಗಳನ್ನು ಹೇಳುವುದಿಲ್ಲ. ಕೇವಲ ಪರಿಮಾಣ ಅಥವಾ ಗಾತ್ರವನ್ನು ಸೂಚಿಸುತ್ತವೆ. ಹೀಗೆ – ವಸ್ತುವಿನ ಪರಿಮಾಣ, ಗಾತ್ರವನ್ನು ಹೇಳುವ `ಅಷ್ಟು', `ಇಷ್ಟು', `ಹಲವು', `ಕೆಲವು', `ಎನಿತು', `ಅನಿತು' ಆಸು, ಈಸು, ಏಸು ಮುಂತಾದ ಪದಗಳೇ `ಪರಿಮಾಣವಾಚಕ'ಗಳು.

ಪರಿಮಾಣ – ಹಲವು, ಕೆಲವು. (ಹಲವು ನದಿಗಳು, ಕೆಲವು ಹಣ್ಣುಗಳು)
ಗಾತ್ರ – ಅಷ್ಟು, ಇಷ್ಟು (ಗುಡ್ಡದಷ್ಟು, ಆನೆಯಷ್ಟು)
ಅಳತೆ – ಅಷ್ಟು, ಇಷ್ಟು (ಅಷ್ಟು ದೂರ, ಇಷ್ಟು ಪುಸ್ತಕಗಳು) – ಇತ್ಯಾದಿ.
ಹಲವು, ಅನಿತು, ಇತಿತು

## 7) ಪ್ರಕಾರವಾಚಕಗಳು:

ವಸ್ತುಗಳ ಸ್ಥಿತಿ ಅಥವಾ ರೀತಿಗಳನ್ನು ತಿಳಿಸುವ ಶಬ್ದಗಳೆಲ್ಲ ಪ್ರಕಾರವಾಚಕಗಳೆನಿಸುವುವು. ಇವೂ ಒಂದು
ಬಗೆಯ ಗುಣವಾಚಕಗಳೇ ಅಹುದು.
ಉದಾ:- ಅಂಥ, ಅಂಥಹುದು, ಇಂಥ, ಇಂಥದು, ಇಂಥಹುದು, ಎಂತಹ, ಎಂಥ, ಇಂಥದು, ಅಂತಹುದು, ಇಂತಹುದು, ಅಂಥವನು, ಅಂಥವಳು, ಅಂಥದು, ಅಂತಹವನು, ಇಂತಹವನು

## 8) ದಿಗ್ವಾಚಕ :

ದಿಕ್ಕುಗಳನ್ನು ಸೂಚಿಸುವ ಪದಗಳೇ ದಿಗ್ವಾಚಕಗಳು.
ಉದಾ:- ಮೂಡಣ, ಪಡುವಣ, ತೆಂಕಣ, ಬಡಗಣ, ಮೂಡಲು, ಪಡುವಲು, ತೆಂಕಲು, ಬಡಗಲು, ಪೂರ್ವ, ಪಶ್ಚಿಮ, ದಕ್ಷಿಣ, ಉತ್ತರ, ಆಗ್ನೇಯ, ನೈರುತ್ಯ, ವಾಯುವ್ಯ, ಈಶಾನ್ಯ, ಆಚೆ, ಈಚೆ ಇತ್ಯಾದಿ.